ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಡಿಕೇರಿ-ಕೊಡಗು

ಎಸ್.ಸಿ ಸಂಖ್ಯೆಃ **11/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಷಣ್ಮುಗಮ್ | ಫ್ರಾಸಾಃ 1 |
| ತಂದೆಯ ಹೆಸರು | : | ಲೇಟ್ ಆರ್ಮುಗಮ್ | ಚಾಸಾಃ 1 |
| ವಯಸ್ಸು | : | 65 ವರ್ಷ | |
| ವೃತ್ತಿ | : | ಕೂಲಿ ಕೆಲಸ | |
| ವಾಸ | : | ಸುಂದರನಗರ ಗ್ರಾಮ, ಕುಶಾಲನಗರ. | |

ಸಾಕ್ಷಿಯನ್ನು ದಿನಾಂಕ **26-09-2023** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-2 ಮತ್ತು ಚಾಸಾ-3 ರವರು ನನಗೆ ಗೊತ್ತು. ಚಾಸಾ-3 ಈಗ ಮೃತಪಟ್ಟಿದ್ದಾರೆ. ಚಾಸಾ-4 ನನ್ನ ಮಗಳು. ಚಾಸಾ-5 ನನ್ನ ಹೆಂಡತಿ. ಚಾಸಾ-6 ಮತ್ತು 7 ನನಗೆ ಗೊತ್ತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಗಳ ಗಂಡ.

ಚಾಸಾ-4 ನನ್ನ ಮಗಳು ಮದುವೆ ಆಗಿ ಆಕೆಯು ವಿಚ್ಛೇದನ ಪಡೆಕೊಡಿರುತ್ತಾಳೆ. ಆ ನಂತರ ನ್ಯಾಯಾಲಯದ ಮುಂದೆ ಇರುವ ಆರೋಪಿ ಚಾಸಾ-4 ನನ್ನ ಮಗಳನ್ನು 2 ನೇ ಮದುವೆ ಆಗಿರುತ್ತಾರೆ. ನನ್ನ ಮಗಳಿಗೆ ಮೊದಲನೆ ಗಂಡನಿಂದ ಒಂದು ಗಂಡು ಮಗು ಇದೆ. 2 ನೇ ಗಂಡ ಆರೋಪಿಯಿಂದ ಒಂದು ಹೆಣ್ಣು ಮಗು ಹುಟ್ಟಿದೆ. ಆರೋಪಿ ಮತ್ತು ನನ್ನಮಗಳು ನಮ್ಮ ಮನೆಯ ಹಿಂಭಾಗದಲ್ಲಿ ಪ್ರತ್ಯೇಕವಾಗಿ ವಾಸಮಾಡಿಕೊಂಡು ಇದ್ದರು.

ಆರೋಪಿ ನನ್ನ ಮಗಳನ್ನು ಸ್ವಲ್ಪ ದಿನ ಮಾತ್ರ ಚೆನ್ನಾಗಿ ನೋಡಿಕೊಂಡ ಆ ನಂತರ ಜಗಳ ಮಾಡಿಕೊಂಡಿದ್ದ ನಾನು ಸಮಾಧಾನ ಮಾಡುತಿದ್ದೆ. ಒಂದು ವರ್ಷದ ಹಿಂದೆ ಆರೋಪಿ ಮತ್ತು ನನ್ನ ಮಗಳ ನಡುವೆ ಜಗಳ ಆಗಿತ್ತು. ನಾನು ಸಮಾಧಾನ ಮಾಡಿ ಹೋಗಿದ್ದೆ. ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಚೆನ್ನಮ್ಮ ಎನ್ನುವವರು ಪಕ್ಕದ ಮನೆಯ ವಾಸಿ ಓಡಿಬಂದು ಆರೋಪಿ ನನ್ನ ಮಗಳಿಗೆ ಚಾಕು ಹಾಕುತ್ತಿರುವುದಾಗಿ ತಿಳಿಸಿದರು. ನಾನು ಕೂಡಲೇ ಹೋಗಿ ನೋಡಿದಾಗ ನನ್ನ ಮಗಳು ಮನೆಯಿಂದ ಆಚೆ ರಸ್ತೆಯಲ್ಲಿ

ಬಿದ್ದಿದ್ದಳು. ನನ್ನ ಮಗಳಿಗೆ ಚಾಕು ಹಾಕಲಾಗಿತ್ತು, ಬೆನ್ನಿಗೆ, ಎದೆಗೆ, ಕುತ್ತಿಗೆಗೆ ಚಾಕು ಹಾಕಿದ್ದು, ರಕ್ತ ಸುರಿಯುತಿತ್ತು. ಆರೋಪಿ ಆ ಸಮಯದಲ್ಲಿ ಅಲ್ಲಿಂದ ಓಡಿ ಹೋಗಿದ್ದ. ನಂತರ ನಾವು ನನ್ನ ಮಗಳಿಗೆ ಬಟ್ಟೆ ಬದಲಾಯಿಸಿ ಆಟೋದಲ್ಲಿ ಚಾಸಾ-7 ರವರ ಜೊತೆ ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಈ ಸಂಬಂಧ ನಾನು ಪೊಲೀಸ್ ಠಾಣೆಗೆ ಹೋಗಿ ಫಿರ್ಯಾದು ಕೊಟ್ಟಿರುತ್ತೇನೆ. ಸದರಿ ಫಿರ್ಯಾದನ್ನು ನಿಪಿ-1 ಎಂದು ಮತ್ತು ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಾರನೇ ದಿನ ಪೊಲೀಸರು ಬೆಳಿಗ್ಗೆ 9.30 ಗೆ ಸ್ಥಳಕ್ಕೆ ಬಂದಿದ್ದರು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದರು. ಪೊಲೀಸರು ನನ್ನ ಮಗಳ ರಕ್ತ ಆಗಿರುವ ಬಟ್ಟೆ ಟೈಲ್ಸ್ ಮೇಲೆ ಬಿದಿದ್ದ ರಕ್ತ ಇವುಗಳನ್ನೆಲ್ಲಾ ತೆಗೆದುಕೊಂಡರು ಈ ಬಗ್ಗೆ ಬರೆದಿರುವ ಮಹಜರ್ ಗೆ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ-2 ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ರಸ್ತೆಯಲ್ಲಿ ಬಿದ್ದಿದ್ದ ರಕ್ತ ಸಿಕ್ತ ಮಣ್ಣನ್ನು ಮತ್ತು ಸಾದಾ ಮಣ್ಣನ್ನು ಪೊಲೀಸರು ವಶಪಡಿಸಿಕೊಂಡರು. ರಕ್ತ ಸಿಕ್ತ ಬಟ್ಟೆಗಳನ್ನು 1) ಅರ್ಧ ತೋಳಿದ ಚೂಡಿದಾರ ಮು.ಮಾ-1 ಎಂದು, 2) ಲೆಗ್ಗಿಂಗ್ಸ್ ಪ್ಯಾಂಟ್ ಮು.ಮಾ-2 ಎಂದು, 3) ಅರಿದಿರುವ ಬ್ರಾ ಮ.ಮಾ-3 ಎಂದು, 4) ಶಾಲು ಮು.ಮಾ-4 ಎಂದು, 5) ಟೈಲ್ಸ್ ಒರೆಸಿದ ಹತ್ತಿಯನ್ನು ಮು.ಮಾ-5 ಎಂದು, 6) ಟೈಲ್ಸ್ ಮೇಲಿನ ರಕ್ತ ಒರೆಸಿದ ಹತ್ತಿ ಮು.ಮಾ-6 ಎಂದು, 7) ಸಾದಾ ಮಣ್ಣು ಮು.ಮಾ-7 ಎಂದು ಮತ್ತು 8) ರಕ್ತ ಸಿಕ್ತ ಮಣ್ಣು ಮು.ಮಾ-8 ಎಂದು ಗುರುತಿಸಲಾಯಿತು.

ಮಧ್ಯಾಹ್ನ ಆರೋಪಿಯನ್ನು ಪೊಲೀಸರು ಸ್ಥಳಕ್ಕೆ ಕರೆದುಕೊಂಡು ಬಂದರು. ಪೊಲೀಸರು ಆರೋಪಿಯನ್ನು ಬಟ್ಟೆ ಎಲ್ಲಿದೆ ಮತ್ತು ಚಾಕು ಎಲ್ಲಿದೆ ಎಂದು ವಿಚಾರ ಮಾಡಿದರು. ಆರೋಪಿಗೆ ಸಂಬಂಧಿಸಿದ ಒಂದು ಬನಿಯಾನ್ ಮತ್ತು ಚಡ್ಡಿ ಅವುಗಳಿಗೆ ರಕ್ತ ಆಗಿದ್ದು, ಅವುಗಳನ್ನು ಪೊಲೀಸರು ವಶಪಡಿಸಿಕೊಂಡರು. ಬನಿಯಾನ್ ಅನ್ನು ಮು.ಮಾ-9 ಎಂದು ಮತ್ತು ಆರೋಪಿಯ ಚೆಡ್ಡಿಯನ್ನು ಮು.ಮಾ-10 ಎಂದು ಗುರುತಿಸಲಾಯಿತು. ಬಟ್ಟೆಯ ಸ್ಟಾಂಡ್ ಕೆಳಗಡೆ ಇಟ್ಟಿದ್ದ ಚಾಕುವನ್ನು ಆರೋಪಿ ಪೊಲೀಸರಿಗೆ ಕೊಟ್ಟಿದ್ದು, ಅದನ್ನು ಅಮಾನತ್ತು ಪಡಿಸಿಕೊಂಡರು. ಸದರಿ ಚಾಕನ್ನು ನ್ಯಾಯಾಲಯದಲ್ಲಿ ಗುರುತಿಸಿದ್ದು, ಅದನ್ನು ಮು.ಮಾ-11 ಎಂದು ಗುರುತಿಸಲಾಯಿತು. ಆರೋಪಿಯ ಬಟ್ಟೆ ಮತ್ತು ಚಾಕುವನ್ನು ಅಮಾನತ್ತು ಪಡಿಸಿದಾಗ ಬರೆದ ಮಹಜರ್ ಅನ್ನು

ನಿಪಿ-3 ಎಂದು ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ನನ್ನ ಮಗಳ ಮನೆ ಮತ್ತು ಕೃತ್ಯ ಸ್ಥಳ ಇವುಗಳನ್ನು ತೋರಿಸಿರುವ ಫೋಟೋ ಈಗ ಗುರುತಿಸಿದ್ದು, ಚಾಕು ಮತ್ತು ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಾಗ ಇದ್ದ ಫೋಟೊಗಳನ್ನು ಗುರುತಿಸಿದ್ದು, 13 ಫೋಟೊಗಳನ್ನು ಒಟ್ಟಾಗಿ ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿ ಪರ ಶ್ರೀ.ಕೆ.ಎ.ಕೆ.ಆರ್., ವಕೀಲರಿಂದಃ**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಪಾಟೀಸವಾಲು ಮಾಡಲು ಕಾಲಾವಕಾಶ ನೀಡಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.
ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಡಿಕೇರಿ-ಕೊಡಗು.